ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ,
ನವನಗರ, ಪೂ.ಬೆಂ. ರಸ್ತೆ, ಹುಬ್ಬಳ್ಳಿ- 580 025.

Telephone No. : 0836-2223865
: 0836-2223867

HUBLI ELECTRICITY SUPPLY COMPANY LIMITED

[Wholly owned Govt. of Karnataka undertaking]
Corporate Office,
Navanagar,P.B. Road, Hubli-580 025.

Web Site : www.hescom.co.in
E-mail ID : gmadmhr.hescom@gmail.com

ಕ್ರ.ಸಂ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/PLO-458/18-19/2018-19 ದಿನಾಂಕ:

CYS-2657 . 10 OCT 2018

## ಸುತ್ತೋಲೆ

ವಿಷಯ: ಹುವಿಸಕಂನಿ ವ್ಯಾಪ್ತಿಯ ಕಛೇರಿಗಳಲ್ಲಿ ಹಾಗು 33 ಕೆ ವ್ಹಿ ಸ್ಟೇಷನ್ ಗಳಲ್ಲಿ ಹೊರಗುತ್ತಿಗೆ ಏಜೆನ್ಸಿ ಮೂಲಕ ವಿವಿಧ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಕೆಲಸಗಾರರ ಪರಿಶ್ರಮ ಧನ, ಪಿ ಎಫ್ ಮತ್ತು ಇ ಎಸ್ ಐ ವೇತನ ಪಾವತಿ ಕುರಿತು.

ಉಲ್ಲೇಖ:
1. ಮುಖ್ಯ ಔದ್ಯಮಿಕ ಭಾಂದವ್ಯ ಅಧಿಕಾರಿ, ಕವಿಪ್ರನಿನಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕವಿಪ್ರನಿನಿ/ ಮುಔಭಾ/ ಬಿ14/907/2000-01 ದಿನಾಂಕ:24.01.2018.
2. ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಅಧ್ಯಕ್ಷತೆಯಲ್ಲಿ ವಿದ್ಯುತ್ ಗುತ್ತಿಗೆ ನೌಕರರಿಗೆ ಒದಗಿಸಬಹುದಾದ ಸೌಲಭ್ಯಗಳ ಕುರಿತು ಜರುಗಿದ ಸಭೆಯ ನಡಾವಳಿಗಳ ಪತ್ರ ಸಂಖ್ಯೆ: ಸಿವೈಎಸ್-1800 ದಿನಾಂಕ:20.08.2018.
3. ಈ ಕಛೇರಿ ಪತ್ರ ಸಂಖ್ಯೆ:ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/ PLO-458/18-19/2018-19/CYS-2152 ದಿನಾಂಕ:10.09.2018.
4. ಈ ಕಾರ್ಯಾಲಯದ ಪತ್ರ ಸಂಖ್ಯೆ: ಹುವಿಸಕಂನಿ/ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ವಿ)/ಸ(ವಿ)/A-36/18-19 2018-19/CYS-2498/ದಿನಾಂಕ:28.09.2018.
5. ಈ ಕಛೇರಿಯ ಆಂತರಿಕ ಟಿಪ್ಪಣಿ ಅನುಮೋಧನೆಗೊಂಡ ದಿನಾಂಕ: 10-10-2018 PLO.No.458/18-19

**********

ಹುವಿಸಕಂನಿ ವ್ಯಾಪ್ತಿಯಲ್ಲಿ ಒಳಗೊಳ್ಳುವ ಕಛೇರಿಗಳು ಹಾಗು 33 ಕೆ ವ್ಹಿ, ಎಸ್ & ಎಲ್ ಸ್ಟೇಷನ್ ಗಳಲ್ಲಿ ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಸೀಮಿತ ಅವಧಿಗೆ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ನಿಗದಿತ ಅವಧಿಯಲ್ಲಿ ಮಾಸಿಕ ಪರಿಶ್ರಮ ಧನ, ಪಿ ಎಫ್ ವಂತಿಕೆ ಮತ್ತು ಇ ಎಸ್ ಐ ವಂತಿಕೆ ಪಾವತಿಯಾಗದೆ ವಿಳಂಬವಾಗುತ್ತಿರುವುದು ಕಂಪನಿ ಕಾರ್ಯಾಲಯದ ಗಮನಕ್ಕೆ ಬಂದಿರುವುದು. ಈ ವಿಷಯದ ಕುರಿತು ಕಂಪನಿ ಕಾರ್ಯಾಲಯದಲ್ಲಿ ಉಲ್ಲೇಖ(2) ರಲ್ಲಿನಂತೆ ಜರುಗಿದ ಸಭೆಯ ನಡಾವಳಿಗಳಲ್ಲಿ ಚರ್ಚಿಸಿದ ಅಂಶಗಳನ್ನು ಮತ್ತೊಮ್ಮೆ ಗಮನಕ್ಕೆ ತರುತ್ತಾ, ಹುವಿಸಕಂನಿ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿ ಮೂಲಕ ವಿವಿಧ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರಿಗೆ ಪರಿಶ್ರಮ ಧನವನ್ನು ಮಾಸಿಕವಾಗಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಪಾವತಿಸುವಾಗ ಏಕರೂಪತೆಯನ್ನು ಅನುಸರಿಸದಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

(ಪು.ತಿ.ನೋ)

1) ಹೊರಗುತ್ತಿಗೆ ಏಜೆನ್ಸಿರವರು ತಾವು ಗುತ್ತಿಗೆ ನೇಮಿಸಿಕೊಂಡ ಕಾರ್ಮಿಕರಿಗೆ ಮಾಸಿಕ ಪರಿಶ್ರಮ ಧನವನ್ನು ಪ್ರತಿ ತಿಂಗಳು ತಪ್ಪದೇ 10 ನೇ ತಾರೀಕಿನೊಳಗಾಗಿ ಕಾರ್ಮಿಕರ ಬ್ಯಾಂಕ್ ಸೇವಿಂಗ್ಸ್ ಖಾತೆಗೆ ಜಮಾ ಮಾಡುವುದು.
2) ಗುತ್ತಿಗೆದಾರರು ತಮ್ಮ ಗುತ್ತಿಗೆ ಬಿಲ್ಲುಗಳನ್ನು ಪ್ರತಿ ಮಾಹೆಯ ದಿನಾಂಕ-5 ರೊಳಗಾಗಿ ಸಂಬಂಧಪಟ್ಟ ಕಛೇರಿಗಳಿಗೆ ಇಪಿಎಫ್/ಇಎಸ್ಐ ತುಂಬಿದ ಪ್ರತಿಗಳೊಂದಿಗೆ ಸಲ್ಲಿಸುವಂತೆ ಸೂಕ್ತ ಕ್ರಮ ಕೈಗೊಳ್ಳುವುದು.
3) ಸಂಬಂದಿಸಿದ ಕಛೇರಿಗಳು ಸದರಿ ಗುತ್ತಿಗೆ ಬಿಲ್ ಗಳನ್ನು ನಿಯಮಾನುಸಾರ ಪರಿಶೀಲಿಸಿ, ಬಿಲ್ ಗಳನ್ನು ಪಾಸ್ ಮಾಡಿ ಪ್ರತಿ ತಿಂಗಳು 10 ನೇ ತಾರೀಕಿನೊಳಗಾಗಿ ನಿಧಿ ಕೋರಿಕೆಯನ್ನು ಕಂಪನಿ ಕಛೇರಿಗೆ ಸಲ್ಲಿಸುವುದು.
4) ಕಂಪನಿ ಕಛೇರಿಯ ಹಣಕಾಸು ಶಾಖೆಯಲ್ಲಿ 10 ನೇ ತಾರೀಖಿನೊಳಗಾಗಿ ಸಲ್ಲಿಕೆಯಾದ ನಿಧಿ ಕೋರಿಕೆಗಳನ್ನು ಕ್ರೋಢೀಕರಿಸಿ ಪ್ರತಿ ತಿಂಗಳು 15 ನೇ ತಾರೀಖಿನೊಳಗಾಗಿ ನಿಧಿ ಕೋರಿಕೆ ಬಿಡುಗಡೆ ಮಾಡುವುದು.

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಚಾಚು ತಪ್ಪದೇ ಪಾಲಿಸುವುದು.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಕರಡು ಪ್ರತಿ ಅನುಮೋದಿಸಲ್ಪಟ್ಟಿದೆ."

10/X
ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ ಸಂ ಅ)

ಪ್ರತಿಗಳು:

1. ಮುಖ್ಯ ಇಂಜಿನೀಯರ್(ವಿ), ಕಾ & ಪಾ ವಲಯ, ಹುಬ್ಬಳ್ಳಿ/ಬೆಳಗಾವಿ ರವರ ಸೂಕ್ತ ಕ್ರಮಕ್ಕಾಗಿ.
2. ಆರ್ಥಿಕಸಲಹೆಗಾರರು(ಆಂ ಪ), ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
3. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
4. ಅಧೀಕ್ಷಕ ಇಂಜಿನೀಯರ್(ವಿ), ಟಿ. & ಪಿ. ಶಾಖೆ, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
5. ಎಲ್ಲ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತಗಳು, ಹುವಿಸಕಂನಿ.,
6. ಎಲ್ಲ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗಗಳು, ಹುವಿಸಕಂನಿ ರವರಿಗೆ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), 33 ಕೆವ್ಹಿ ಟಿ ಎಲ್ & ಎಸ್ ಎಸ್ ವಿಭಾಗಗಳು, ಹುವಿಸಕಂನಿ ರವರಿಗೆ ಸೂಕ್ತ ಕ್ರಮಕ್ಕಾಗಿ.
8. ಲೆಕ್ಕಾಧಿಕಾರಿ[ಆಂತರಿಕ ನಿರ್ವಹಣೆ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
9. ಹಿರಿಯ ಆಪ್ತ ಕಾರ್ಯದರ್ಶಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮೇಲ್ಕಾಣಿಸಿದ ವಿಷಯದ ಕುರಿತು ದಯಾಪರರ ಅವಗಾಹನೆಗೆ ತರಲು ಕೋರಿದೆ.
10. ಆಪ್ತ ಕಾರ್ಯದರ್ಶಿ, ಮುಖ್ಯ ಆರ್ಥಿಕ ಅಧಿಕಾರಿಗಳು, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮೇಲ್ಕಾಣಿಸಿದ ವಿಷಯದ ಕುರಿತು ದಯಾಪರರ ಅವಗಾಹನೆಗೆ ಹಾಗು ಸೂಕ್ತ ಕ್ರಮಕ್ಕಾಗಿ ಕೋರಿದೆ.